## ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಬಾಗೇಪಲ್ಲಿ.

## ಸಿ.ಸಿ. ಸಂಖ್ಯೆ:75/2020

| | |
|---|---|
| ಫ್ರಾಸಾ | 5 |
| ಚಾಸಾ | 5 |

ಸಾಕ್ಷಿಯನ್ನು ಕರೆಯಿಸಿ ಸತ್ಯ ಭೋದನೆ ಮಾಡಿ ಪ್ರಮಾಣೀಕರಿಸಿದ ದಿನಾಂಕ **05.04.2025.**

| | | |
|---|---|---|
| ಸಾಕ್ಷಿಯ ಹೆಸರು | : | ಬಿ. ನಾಗೇಂದ್ರ ಸಿಂಗ್ |
| ತಂದೆಯ ಹೆಸರು | : | ಬಾಲಾಜಿ ಸಿಂಗ್ |
| ವಯಸ್ಸು | : | 58 ವರ್ಷ |
| ಉದ್ಯೋಗ | : | ಅಬಕಾರಿ ನಿರೀಕ್ಷಕರು, ಚಿಕ್ಕಬಳ್ಳಾಪುರ. |
| ವಾಸಸ್ಥಳ | : | ಚಿಕ್ಕಬಳ್ಳಾಪುರ |

**ಮುಖ್ಯ ವಿಚಾರಣೆ : ಎಪಿಪಿ ರವರಿಂದಃ**

ದಿಃ 01.01.2019 ರಿಂದ 31.01.2019 ರವರೆಗೆ ಬಾಗೇಪಲ್ಲಿ ಅಬಕಾರಿ ನಿರೀಕ್ಷಕರರಾಗಿ ಒಂದು ತಿಂಗಳ ಕಾಲ ಕರ್ತವ್ಯವನ್ನು ನಿರ್ವಹಿಸಿರುತ್ತೇನೆ.

ದಿಃ 31.01.2019 ರಂದು ನಾನು ಮತ್ತು ನನ್ನ ಸಿಬ್ಬಂದಿಯಾದ ಚಾಸಾ-1 ರಿಂದ 4 ರವರು ಬೆಳಿಗ್ಗೆ 7.30 ರ ಸಮಯದಲ್ಲಿ ಬಾಗೇಪಲ್ಲಿ ತಾಲ್ಲೂಕು, ಗೌನಪಲ್ಲಿ ಕ್ರಾಸ್ ಬಳಿ ರಸ್ತೆ ಕಾವಲು ನಡೆಸಿ ವಾಹನ ತಪಾಸಣೆ ಮಾಡುತ್ತಿದ್ದಾಗ, ಗುಡಿಬಂಡೆ ಕಡೆಯಿಂದ ಬಿಳಿಯ ಬಣ್ಣದ ಕೆಎ-12-ಜೆಡ್-6666 ಸಂಖ್ಯೆಯ ಅಂಬಾಸಿಡರ್ ಕಾರ್ ಬರುತ್ತಿದ್ದು, ಸಮವಸ್ತ್ರದಲ್ಲಿದ್ದ ನಮ್ಮನ್ನು ನೋಡಿ ಅದರ ಚಾಲಕ ವಾಹನವನ್ನು ಹಿಂದೆ ತೆಗೆದುಕೊಂಡು ಹೋಗಲು ಪ್ರಯತ್ನಿಸಿದನು. ನಂತರ ನಾವು ವಾಹನವನ್ನು ತಡೆದು ವಾಹನವನ್ನು ಶೋಧನೆ ಮಾಡಲು ನಾನು ಪಂಚರನ್ನು ಹುಡುಕಲು ಪ್ರಯತ್ನಿಸಿ, ಯಾರೂ ಸಿಗದಿದ್ದಾಗ ಅಬಕಾರಿ ಇಲಾಖಾ ಸಿಬ್ಬಂದಿಗಳನ್ನು ಪಂಚರಾಗಿ ಬರಮಾಡಿಕೊಂಡಿರುತ್ತಾರೆ. ಸ್ಥಳದಲ್ಲಿ ಶೋಧನಾ ಸಮುಚಿತ ವಾರೆಂಟ್ ತಯಾರಿಸಿ ಅದಕ್ಕೆ

ಸಿಬ್ಬಂದಿಯಾದ ಚಾಸಾ-1 ಮತ್ತು 2 ರವರ ಸಹಿ ಪಡೆದು ವಾಹನವನ್ನು ಶೋಧನೆ ಮಾಡಲಾಗಿ ಹಿಂಬದಿ ಡಿಕ್ಕಿಯಲ್ಲಿ 20 ಲೀಟರ್ ಸಾಮರ್ಥ್ಯದ ಒಂದು ಕ್ಯಾನ್ ಹಾಗೂ 10 ಲೀಟರ್ ಸಾಮರ್ಥ್ಯದ ಒಂದು ಪ್ಲಾಸ್ಟಿಕ್ ಕ್ಯಾನ್‌ನಲ್ಲಿ ಬಿಳಿ ಬಣ್ಣದ ದ್ರವ ಪದಾರ್ಥ ಕಂಡು ಬಂದಿತ್ತು. ನಂತರ ನಾನು ಸದರಿ ಕ್ಯಾನುಗಳ ಮುಚ್ಚಳ ತೆಗೆದು ವಾಸನೆಯನ್ನು ಗ್ರಹಿಸಿದ್ದು, ಅದು ಗಾಟು ವಾಸನೆ ಇರುವುದನ್ನು ದೃಢಪಡಿಸಿಕೊಂಡೆ. ನಂತರ ವಾಹನ ಚಾಲಕರ ಹೆಸರು ವಿಳಾಸ ಕೇಳಲಾಗಿ ಮೂರ್ತಿ ಬಿನ್ ಗೋಪಾಲಪ್ಪ, ಕುಂಬಾರಹಳ್ಳಿ ಗ್ರಾಮ, ಶಿಡ್ಲಘಟ್ಟ ತಾಲ್ಲೂಕು ಎಂದು ತಿಳಿಸಿರುತ್ತಾರೆ. ನಂತರ ಅಕ್ರಮ ಸೇಂದಿ ಸಾಗಾಟಕ್ಕೆ ಪರವಾನಗಿ ಹೊಂದಿರುವ ಬಗ್ಗೆ ವಿಚಾರಿಸಲು, ಪರವಾನಗಿ ಹೊಂದಿಲ್ಲವೆಂದು ತಿಳಿಸಿರುತ್ತಾರೆ. ನಂತರ ಸದರಿ ಕ್ಯಾನುಗಳಿಂದ ತಲಾ ಒಂದು ಲೀಟರ್ ಸಾಮರ್ಥ್ಯದ ಎರಡು ಪ್ಲಾಸ್ಟಿಕ್ ಬಾಟಲಿಗಳಲ್ಲಿ ಎರಡೂ ಕ್ಯಾನುಗಳಿಂದ ಸೇಂದಿಯನ್ನು ಪಡೆದು ರಾಸಾಯನಿಕ ಪರೀಕ್ಷೆಗೆ ಕಳುಹಿಸಲು ಬಿಳಿ ಬಟ್ಟೆಯಿಂದ ಸುತ್ತಿ, ದಾರದಿಂದ ಕಟ್ಟಿ ಇಲಾಖಾ ಮೊಹರು ಹಾಕಿರುತ್ತೇವೆ. ನಂತರ ಸ್ಥಳದಲ್ಲಿ ಆರೋಪಿಯನ್ನು ದಸ್ತಗಿರಿ ಕ್ರಮ ಅನುಸರಿಸಿ ಮತ್ತು ಪಂಚನಾಮೆಯನ್ನು ಕೈಗೊಂಡಿರುತ್ತೇವೆ. ಅಲ್ಲದೇ ಮಾಲು ಮತ್ತು ಆರೋಪಿಯನ್ನು ಮುಂದಿನ ಕ್ರಮಕ್ಕಾಗಿ ಕಛೇರಿಗೆ ತರಲಾಗಿರುತ್ತದೆ.

ಸಾಕ್ಷಿಯು ನಿಪಿ-1ರಂತೆ ಪಂಚನಾಮೆಯಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ಸಹಿಯನ್ನು **ನಿಪಿ-1(ಡಿ)** ಎಂದು ಗುರುತಿಸಲಾಯಿತು. ಸದರಿ ಪಂಚನಾಮೆಗೆ ಚಾಸಾ-2 ರಿಂದ 4 ರವರು ಸಹಿ ಮಾಡಿರುವುದಾಗಿ ನುಡಿಯುತ್ತಾರೆ. ಸದರಿ ಪಂಚನಾಮೆಯನ್ನು ಬೆಳಿಗ್ಗೆ 7.30 ರಿಂದ 8.30 ರವರೆಗೆ ಜರುಗಿಸಿರುವುದಾಗಿ ನುಡಿಯುತ್ತಾರೆ. ನಂತರ ಆರೋಪಿತನ ವಿರುದ್ಧ ಪ್ರಥಮ ವರ್ತಮಾನ ವರದಿಯನ್ನು ದಾಖಲಿಸಿ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ಪಂಚನಾಮೆಯನ್ನು **ನಿಪಿ-5** ಹಾಗೂ ಸಾಕ್ಷಿಯ ಸಹಿಯನ್ನು **ನಿಪಿ-5(ಎ)** ಎಂದು ಗುರುತಿಸಲಾಯಿತು.

ದಿಃ 16.02.2019 ರಂದು ರಾಸಾಯನಿಕ ಮಾದರಿಗಳನ್ನು ಕೇಂದ್ರ ರಾಸಾಯನಿಕ ಪ್ರಯೋಗಾಲಯ, ಬೆಂಗಳೂರಿಗೆ ಕಳುಹಿಸಿರುತ್ತೇವೆ. ಚಾಸಾ-4 ರವರು ದಿಃ 27.02.2019 ರಂದು ವರದಿಯೊಂದಿಗೆ ಮಾದರಿಗಳನ್ನು ಪಡೆದು ನನಗೆ ಒಪ್ಪಿಸಿರುತ್ತಾರೆ. ಸಾಕ್ಷಿಯು ಮುದ್ದೇಮಾಲುಗಳನ್ನು ನೋಡಿ ಗುರುತಿಸಿದರು. ಅಲ್ಲದೇ ಆರೋಪಿಯನ್ನು ನ್ಯಾಯಾಲಯದಲ್ಲಿ ನೋಡಿ ಗುರುತಿಸಿದರು. ಸಾಕ್ಷಿಯು ಸ್ವತ್ತಿನ ಪಟ್ಟಿಯನ್ನು ನೋಡಿ ಗುರುತಿಸಿದ್ದು, ಅದನ್ನು **ನಿಪಿ-6** ಎಂದು ಸಾಕ್ಷಿಯ ಸಹಿಯನ್ನು **ನಿಪಿ-6(ಎ)** ಎಂದು ಗುರುತಿಸಲಾಯಿತು. ನಿಪಿ-4 ಮಾದರಿ ಸೀಲಿನ ನಕಲಿನಲ್ಲಿರುವ ಸಾಕ್ಷಿಯ ಸಹಿಯನ್ನು **ನಿಪಿ-4(ಬಿ)** ಎಂದು ಗುರುತಿಸಲಾಯಿತು. ನಿಪಿ-3 ಶೋಧನಾ ಸಮುಚಿತ ಆಧಾರದಲ್ಲಿರುವ ಸಾಕ್ಷಿಯ ಸಹಿಯನ್ನು **ನಿಪಿ-3(ಬಿ)** ಎಂದು ಗುರುತಿಸಲಾಯಿತು. ನಂತರ ಆರೋಪಿಯನ್ನು ದಸ್ತಗಿರಿ ಮಾಡಿ ನ್ಯಾಯಾಲಯದ ಮುಂದೆ ರಿಮ್ಯಾಂಡ್ ಅರ್ಜಿಯೊಂದಿಗೆ ಹಾಜರುಪಡಿಸಲಾಯಿತು. ಅಲ್ಲದೇ ಮುಂದಿನ ತನಿಖೆಗಾಗಿ ಚಾಸಾ-9 ರವರಿಗೆ ಕತವನ್ನು ಹಸ್ತಾಂತರಿಸಿರುತ್ತೇನೆ.

**ಪಾಟೀಸವಾಲು : ಶ್ರೀ ಎ.ಎನ್ ವಕೀಲರಿಂದ, ಆರೋಪಿ ಪರವಾಗಿಃ**

ನಾನು ಕಛೇರಿಯಿಂದ ಬೆಳಿಗ್ಗೆ 7.00 ಗಂಟೆಗೆ ಘಟನಾ ಸ್ಥಳಕ್ಕೆ ಹೋಗಲೆಂದು ಹೊರಟಿದ್ದೆ. ಕಛೇರಿಯಿಂದ ಹೊರಗೆ ಹೋಗುವಾಗ ಚಲನ ವಹಿಯಲ್ಲಿ ನಮೂದಿಸುತ್ತೇವೆ ಎಂದರೆ ಸರಿ. ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ಆ ರೀತಿ ಹಾಜರುಪಡಿಸಲು ತೊಂದರೆ ಇರಲಿಲ್ಲ. ಘಟನಾ ದಿನ ನಾನು ಹಾಗೂ ಚಾಸಾ-1 ರಿಂದ 4 ರವರು ಘಟನಾ ಸ್ಥಳದಲ್ಲಿ ಇದ್ದೆವು. ಚಾಲಕರಾಗಿ ಪ್ರಭಾಕರ್ ರವರು ಇದ್ದರು. ದಾಳಿ ಸಮಯದಲ್ಲಿ ಚಾಲಕರ ಸಹಿ ಪಡೆಯಲಾಗುತ್ತದೆ ಎಂದರೆ ಸರಿ. ಈ ಪ್ರಕರಣದಲ್ಲಿ ಚಾಲಕರ ಸಹಿ ಪಡೆದಿರುವುದಿಲ್ಲ. ದಾಳಿ ಸಮಯದಲ್ಲಿ ಎರಡು ಬಿಳಿ ಬಣ್ಣದ ಕ್ಯಾನುಗಳು ಇದ್ದವು ಎಂದು ತಿಳಿಸಿದ್ದು, ಅವುಗಳನ್ನು ಅಬಕಾರಿ ನಿರೀಕ್ಷಕರಿಗೆ ಒಪ್ಪಿಸಿರುತ್ತೇನೆ. ಆ ಬಗ್ಗೆ ಪತ್ರ ವ್ಯವಹಾರ ಮಾಡಿ ಅವರಿಂದ ಸ್ವೀಕೃತಿ ಪಡೆದಿರುತ್ತೇನೆ. ಸದರಿ ಸ್ವೀಕೃತಿಯನ್ನು

ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ಆ ರೀತಿ ಹಾಜರುಪಡಿಸಲು ತೊಂದರೆ ಇರಲಿಲ್ಲ. ನಾನು ಆ ರೀತಿ ಯಾವುದೇ ಪತ್ರ ವ್ಯವಹಾರ ಮಾಡಿಲ್ಲ ಎಂದರೆ ಸರಿಯಲ್ಲ. ಘಟನಾ ದಿನ ನಾವು ದಾಳಿ ಮಾಡಿದ ಸಂದರ್ಭ ಫೋಟೋ ಅಥವಾ ವೀಡಿಯೋ ಚಿತ್ರೀಕರಣ ಮಾಡಿರುವುದಿಲ್ಲ.

ದಾಳಿ ಮಾಡಿದ ಸ್ಥಳದ ಚಕ್ಕುಬಂದಿ ಪೂರ್ವಕ್ಕೆ – ಗೌನಪಲ್ಲಿ ಗ್ರಾಮಕ್ಕೆ ಹೋಗುವ ರಸ್ತೆ, ಪಶ್ಚಿಮಕ್ಕೆ – ಖಾಲಿ ನಿವೇಶನ, ಉತ್ತರಕ್ಕೆ – ಕೋಡಿಕೊಂಡ ಗ್ರಾಮಕ್ಕೆ ಹೋಗುವ ರಸ್ತೆ ಹಾಗೂ ದಕ್ಷಿಣಕ್ಕೆ ಬಾಗೆಪಲ್ಲಿಗೆ ಹೋಗುವ ರಸ್ತೆ ಇದೆ. ಸ್ಥಳ ಪಂಚನಾಮೆಯನ್ನು ಬೆಳಿಗ್ಗೆ 7.30 ರಿಂದ 8.30 ರವರೆಗೆ ನಡೆಸಲಾಯಿತು.

ಚಾಸಾ–1 ಮತ್ತು 2 ರವರು ಅಕ್ಷರಸ್ಥರು. ಪಂಚನಾಮೆ ಪ್ರತಿಗೆ ಚಾಲಕರ ಸಹಿ ಪಡೆಯುವ ಅವಶ್ಯಕತೆ ಇರಲಿಲ್ಲ. ಸ್ವತ್ತಿನ ಪಟ್ಟಿಗೆ ಚಾಸಾ–1 ಮತ್ತು 2 ರವರು ಸಹಿ ಮಾಡಿದ್ದಾರೆ. ದಸ್ತಗಿರಿ ನೋಟಿಸ್ಸಿನಲ್ಲಿ ಆರೋಪಿಯ ಸಹಿ ಪಡೆದಿರುವ ಬಗ್ಗೆ ನೆನೆಪಿಲ್ಲ. ದಸ್ತಗಿರಿ ವಿಚಾರ ಆರೋಪಿಯ ಕುಟುಂಬಸ್ಥರಿಗೆ ದೂರವಾಣಿ ಮೂಲಕ ತಿಳಿಸಿದ್ದೆವು. ಸದರಿ ದೂರವಾಣಿ ಸಂಖ್ಯೆ ನೆನೆಪಿಲ್ಲ.

ದಾಳಿ ಮಾಡುವ ಪೂರ್ವ ಘನ ನ್ಯಾಯಾಲಯದಿಂದ ಶೋಧನಾ ವಾರೆಂಟ್ ಪಡೆದಿರುವುದಿಲ್ಲ. ಚಾಸಾ–1 ರಿಂದ 3 ರವರು ಪಂಚನಾಮೆಗೆ ಸಹಿ ಮಾಡಿದ್ದಾರೆ. ಶೋಧನಾ ಸಮುಚಿತ ವಾರೆಂಟಿನಲ್ಲಿ ಅಪೂರ್ಣ ಮಾಹಿತಿ ಇದೆ ಎಂದರೆ ವರದಿ ಬಂದಿರಲಿಲ್ಲ ಎಂದು ನುಡಿಯುತ್ತಾರೆ. ಮಾದರಿ ಸೀಲಿಗೆ ಚಾಸಾ–1 ಮತ್ತು 2 ರವರು ಸಹಿ ಮಾಡಿದ್ದಾರೆ. ಆ ಪ್ರತಿಗೆ ಚಾಸಾ–4 ರವರ ಸಹಿ ಪಡೆಯುವ ಅವಶ್ಯಕತೆ ಇರಲಿಲ್ಲ ಎಂದು ನುಡಿಯುತ್ತಾರೆ. ಇಲಾಖೆಯ ಅಂಕಿ ಅಂಶಗಳಿಗೋಸ್ಕರ ಸುಳ್ಳು ಪ್ರಕರಣ ಸೃಷ್ಟಿಸಲಾಗಿದೆ ಎಂದರೆ ಸರಿಯಲ್ಲ. ಆ ದಿನ ನಾನು ಮತ್ತು ನಮ್ಮ ಸಿಬ್ಬಂದಿ ಕರ್ತವ್ಯದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ಎರಡು ಬಾಟಲಿಗಳನ್ನು ರಾಸಾಯನಿಕ ಪರೀಕ್ಷೆಗೆ ಕಳುಹಿಸಿದ್ದೆವು. ಸಾಕ್ಷಿಯು ನ್ಯಾಯಾಲಯದಲ್ಲಿದ್ದ ಎರಡು ಬಾಟಲಿಗಳ ಪೈಕಿ ಒಂದು

ಬಾಟಲಿಯಲ್ಲಿ ಸಹಿ ಇಲ್ಲ ಎಂದು ನುಡಿಯುತ್ತಾರೆ. ಯಾವುದೋ ಬೇರೆ ಪ್ರಕರಣಕ್ಕೆ ಸಂಬಂಧಿಸಿದ ಭೌತಿಕ ವಸ್ತುವನ್ನು ಆರೋಪಿಗೆ ತೊಂದರೆ ನೀಡಲು ಹಾಜರುಪಡಿಸಿದ್ದೇವೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

ಓ ಹೇ ಕೇ ಸ ಇದೆ

ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಬಾಗೇಪಲ್ಲಿ.